'ಓಹೋ. ಅದು ಒಳ್ಳೆಯ ಕೃತಿಯೇ. ನೀವು ಓದಿದ್ದೀರಾ' ಅಂದ.

ದೂಳು ಬಡಿದಿದ್ದನ್ನು ಜಾಡಿಸಿ ತಂದಳು. ಆತನ ಮುಂದೆ ಹಿಡಿದಳು.

ಮನಕ್ಕೆ ಸಾವಿರ ರೆಕ್ಕೆ ಬಂದಂತೆ ಆತನ ಮುಖ ಆತ್ಮವಿಶ್ವಾಸ ಪ್ರಕಟಿಸಿತು. ತಾನು ಅದ್ಭುತ ಕವಿ ಎಂಬುದು ಈಕೆಗೆ ತಿಳಿದಿದೆ ಎಂದು ಆನಂದತುಂದಿಲನಾದ. ಆಕೆ ಮಾತಾಡಲಿಲ್ಲ.

'ನೀವು ನಮ್ಮವರಂತೆ...' ರಾಗ ತೆಗೆದ.

'ನಾನು ಯಾರವಳು, ಎಲ್ಲಿಯವಳು? ನದಿಮೂಲ ಹುಡಕಬಾರದು' ಎಂದು ಹೇಳಬೇಕೆಂದಳು. ಆದರೆ ಆತನೇ ಹೇಳಿದ. 'ನನ್ನದು ಸ್ವತಂತ್ರಕಪಿಗೋತ್ರ'ಎಂದು.

ಕಪಿಗೆ ಸ್ವಾತಂತ್ರ್ಯವೇ? ಆತನನ್ನು ನೋಡಿ ನಗು ಬಂತು.

'ಇರಲಿ. ಜಗತ್ತಿನಲ್ಲಿ 100 ವರ್ಷಗಳಲ್ಲಿ ಸಾಯುವ ಭಾಷೆಗಳಲ್ಲಿ ಕನ್ನಡವೂ ಒಂದು ಎಂದು ಪಟ್ಟಿ ಮಾಡಿದ್ದಾರೆ. ಅದಕ್ಕೆ ತಮ್ಮ ಅಭಿಪ್ರಾಯ?' ಎಂದಳು. ಆತ ಅಷ್ಟುದೂರ ಯೋಚಿಸಿದ್ದಲ್ಲ. 'ನನಗೆ ಗೊತ್ತಿಲ್ಲ' ಎಂದು ಹೇಳಿದ. ಆತನ ಬಗಲ ಚೀಲ ಉಬ್ಬಿತ್ತು. ತನಗಾಗಿ ಏನಾದರೂ ಉಡುಗೊರೆ ತಂದಿದ್ದಾನೆಯೇ ಎಂದು ಸಂದೇಹ ವ್ಯಕ್ತಪಡಿಸಿ ಆ ಚೀಲದತ್ತ ದೃಷ್ಟಿ ನೆಟ್ಟಳು. ಕ್ಷಣ ಗಾಬರಿಯಾಯಿತು. ಆ ಚೀಲದಲ್ಲಿ ಇರುವುದೇನು? ಎಂದು ಪ್ರಶ್ನಿಸಿಕೊಂಡಳು. ಅವನನ್ನೇ ಪ್ರಶ್ನಿಸಿದಳು.

ಆ ಚೀಲದಿಂದ ಒಂದೊಂದನ್ನೇ ಹೊರ ತಗೆದ. ಅದರಲ್ಲಿ ಒಂದು ಕಿರೀಟವಿತ್ತು. ಕಿರೀಟದ ಮುಂದುಗಡೆ ಕುಮಾರ ಕವಿ ಚಕ್ರವರ್ತಿ ಎಂದು ಕೆತ್ತಿದ ಕೆತ್ತನೆ. ಆಮೇಲೆ ತನಗೆ ಬಂದ ಪ್ರಶಸ್ತಿಯ ಸರ್ಟಿಫಿಕೇಟುಗಳು ಎಲ್ಲವನ್ನು ಆಕೆಯ ಮುಂದೆ ಹರವಿದ. ತನ್ನ ಸಾಧನೆಯನ್ನು ಮನಸೊ ಇಚ್ಛೆ ಬಣ್ಣಿಸಿಕೊಂಡ. ಆಕೆಗೆ ಈತನನ್ನು ಈಗಲೇ ಹೊರಹಾಕಬೇಕೆಂದೆನಿಸಿತು. ಬಂದ ಅತಿಥಿಯನ್ನು ಹಾಗೆ ಮಾಡುವುದು ಒಳ್ಳೆಯದಲ್ಲ ಎಂದು ಸುಮ್ಮನಾದಳು.

ಇಂತಹ ಅಪ್ಪಟ ಆತ್ಮರತಿ ಹೊಂದಿರುವ ಮನುಷ್ಯ ಹೇಗೆ ತನ್ನ ಸಂಕೀರ್ಣವಾದ ಆತ್ಮಚರಿತ್ರೆಗೆ ನ್ಯಾಯ ಒದಗಿಸಲು ಸಾಧ್ಯ ಎಂದುಕೊಂಡಳು. ಮನದಲ್ಲೆ ತೀರ್ಮಾನಿಸಿ ಈತನನ್ನು ಹೇಗಾದರೂ ಮಾಡಿ ಉಪಾಯದಿಂದ ಹೊರಹಾಕುವ ಬಗೆ ಯೋಚಿಸಿದಳು.

'ಈ ದಿನ ನಾನು ಸ್ವಲ್ಪ ಅವಸರದಲ್ಲಿದ್ದೇನೆ. ಇನ್ನೂ ಎಂಟು ದಿನ ಬಿಟ್ಟು ಬನ್ನಿ' ಎಂದಳು. 'ಆಗಲಿ ಮೇಡಂ' ಎಂದು ಎದ್ದು ನಿಂತ. ಬೀಳ್ಕೊಡಲು ಬಾಗಿಲವರೆಗೆ ಬಂದಳು. ಅವನು ಬಾಗಿಲು ದಾಟಿ ಹೊರಟು ಹೋದ.

ನಾಲ್ಕು ದಿನವಾಗಿತ್ತು.

ಡಿಪ್ರೆಶನ್ ತಹಬಂದಿಗೆ ಬಂದಿತ್ತು. ಮನಸ್ಸು ಆಹ್ಲಾದಕರವಾಗಿತ್ತು. ಕಾಂಪೌಂಡಿನಲ್ಲಿದ್ದ ಗುಲಾಬಿ ಬಕುಳ ಜಾಜಿ ಗಿಡಗಳು ಇವಳ ಡಿಪ್ರೆಶನ್‌ನಂತೆಯೇ ಬಾಡಿ ಹೋಗಿದ್ದವು. ಅವಕ್ಕೆ ನೀರುಣಿಸಿ ಪುನಃ ಚೇತನ ಒದಗಿಸುವುದು ಅನಿವಾರ್ಯವಾಗಿತ್ತು. ಅಂದು ಬಹುಸಮಯ ಕಾಂಪೌಂಡಿನಲ್ಲೆ ಕಳೆದಳು. ಬಕುಳದ ಮಣ್ಣಿನ ಕಟ್ಟೆ ಗಟ್ಟಿ ಮಾಡುತ್ತಿರುವಾಗಲೇ, 'ಮ್ಯಾಡಂ' ಎಂದು ಯಾರೋ ಕೂಗಿದಂತಾಯಿತು. ಕತ್ತೆತ್ತಿ ನೋಡಿದರೆ ಕವಿ ಚಕ್ರವರ್ತಿ ಬಂದಿದ್ದಾನೆ.

'ಮ್ಯಾಡಂ, ನಿಮಗೆ ಒಂದು ನಿನ್ನಯಷ್ಟೆ ಬರೆದು ಮುಗಿಸಿದ ಕಥೆ ತಂದಿದ್ದೇನೆ. ನೀವು ಒದಬೇಕು' ಎಂದು ಕಾಂಪೌಂಡಿನ ಆಚೆ ನಿಂತ.

'ಆಯ್ತು. ಕಾಂಪೌಂಡಿನ ಮೇಲೆ ಇಟ್ಟು ಹೋಗಿ' ಎಂದಳು. ಆತ ಕಥೆಯನ್ನು ಕೌಂಪೊಂಡಿನ ಮೇಲೆ ಇಟ್ಟು. ಅದರ ಮೇಲೊಂದು ಕಲ್ಲು ಇಟ್ಟು ಹೋದ.

ಗಿಡಗಳಿಗೆ ನೀರುಣಿಸಿದ ಮೇಲೆ ಆ ಕಥೆಯನ್ನು ಒಳಗೆ ಹಿಡಿದು ತಂದು ಜಾಡಿಸಿ ಟೇಬಲಿನ ಮೇಲೆ ಒಗೆದಳು ಮತ್ತು ಕನಿಕರ ಬಂದಂತಾಗಿ ಮತ್ತೆ ತೆಗೆದುಕೊಂಡು ಕುತೂಹಲಕ್ಕಾಗಿ ಕಣ್ಣು ಹಾಯಿಸಿ ಹಾಸಿಗೆಯ ಮೇಲೆ ಅಂಗಾತ ಮಲಗಿ ಹಾಗೇ ಓದಹತ್ತಿದಳು.

ಆ ಸಾಲುಗಳೆಲ್ಲ ತನ್ನವೆಂಬುವಂತಹ ಆಪ್ತತೆಯಲ್ಲಿ ಆ ಕಥೆ ಆರಂಭವಾಗಿತ್ತು. ಕುತೂಹಲದಿಂದ ಓದಹತ್ತಿದಳು. ಕೆಲಸಾಲುಗಳು ಬೆದರಿಸಹತ್ತಿದವು.

ಒಂದು ದಿನ ಅವನು ಊರಿಗೆ ಹೋಗುತ್ತೇನೆ ಎಂದು ಹೋದ, ಹೋದ ತಕ್ಷಣವೇ ಅವಳು ಅವನ ಸ್ನೇಹಿತನನ್ನು ಮನೆಗೆ ಆಹ್ವಾನಿಸಿದಳು. ಅವನು ಊರಿಗೆ ಹೋಗಿದ್ದಿಲ್ಲ. ಬಸ್ ನಿಲ್ದಾಣದಲ್ಲಿ ಕೆಲಕಾಲ ಕಳೆದು ಮನೆಗೆ ಬಂದಾಗ ರೆಡ್ ಹ್ಯಾಂಡ್ ಆಗಿ ಗಂಡನ ಕೈಯಲ್ಲಿ ಸಿಕ್ಕು ಬಿದ್ದರು. ಆತ ತನ್ನ ಎಡಗಾಲಿನ ಪಾದರಕ್ಷೆಯಿಂದ ಇಬ್ಬರಿಗೂ ದಬದಬ ಹೊಡೆದ. ಇವಳಿಗಿಂತ ಅವನಿಗೆ ಮುಖದ ಚರ್ಮ ಹೆಬ್ಬುವ ಹಾಗೆ. ಮೂಗು ಬಾಯುವ